ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರ ಕಾರ್ಯನಿರ್ವಹಣೆ ಕುರಿತು

2561 - ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಲೆಕ್ಕಿಗರು ಪಹಣಿ ಪ್ರತಿಯನ್ನು ನೀಡುವಾಗ ಅದರ ಎಲ್ಲಾ ಅಂಕಣಗಳನ್ನು ಮತ್ತು ವಿವರವಾದ ಭೂ ಕಂದಾಯ ಪಾವತಿಸಿದ್ದಕ್ಕೆ ನೀಡುವ ರಶೀದಿಯಲ್ಲಿ ಮಾಹಿತಿಗಳನ್ನು ನಿರೂಪಿಸದೆ ಇರುವುದು ನಿಜವಲ್ಲವೇ?

ಆ) ಇದರಿಂದ ಗ್ರಾಮಲೆಕ್ಕಿಗರು ರೈತರನ್ನು ಅನಾವಶ್ಯಕ ಗೊಂದಲಕ್ಕೀಡು ಮಾಡುವುದು ಸರ್ಕಾರಕ್ಕೆ ತಿಳಿದಿಲ್ಲವೆ, ಹಾಗಿದ್ದಲ್ಲಿ ಇಂತಹ ವರ್ತನೆಯನ್ನು ತಡೆಯಲು ಸರ್ಕಾರವು ಕ್ರಮ ಕೈಗೊಂಡಿದೆಯೆ, ಹಾಗಿದ್ದಲ್ಲಿ ಸದರಿ ಮಾಹಿತಿಯ ಪ್ರಕಾರ ಎಲ್ಲಾ ಉಡುಪಿ ತಾಲೂಕಿನಲ್ಲಿ ಎಲ್ಲಾ ಗ್ರಾಮಲೆಕ್ಕಿಗರು ಇದೇ ರೀತಿಯ ಕ್ರಮವನ್ನು ಮುಂದುವರೆಯಿಸುತ್ತಿದ್ದು ಇದನ್ನು ತಡೆಯದಿರುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಈಗಿರುವ ಹಾಲಿ ಸೂಚನೆಗಳ ಪ್ರಕಾರ ಎಲ್ಲ ಗ್ರಾಮಲೆಕ್ಕಿಗರು ಪಹಣಿಯಲ್ಲಿಯ ಮತ್ತು ಕಂದಾಯ ಪಾವತಿ ಮಾಡಿದ್ದಕ್ಕೆ ನೀಡುವ ರಶೀದಿಯಲ್ಲಿಯ ಎಲ್ಲ ಅಂಕಣಗಳನ್ನು ವಿವರವಾಗಿ ಸಮೂದಿಸಬೇಕಾಗುವುದು. ಈ ಸೂಚನೆಗಳನ್ನು ಪಾಲಿಸದೇ ಇರುವ ಬಗ್ಗೆ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಉಡುಪಿ ತಾಲೂಕಿನ ಗ್ರಾಮಲೆಕ್ಕಿಗರು ರೈತರನ್ನು ಅನಾವಶ್ಯಕವಾಗಿ ತೊಂದರೆಗೀಡು ಮಾಡಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ, ಅಂತಹ ಪ್ರಸಂಗಗಳು ಗಮನಕ್ಕೆ ಬಂದರೆ ಸಂಬಂಧಿಸಿದ ಗ್ರಾಮಲೆಕ್ಕಿಗರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನಮಂಡಲದ ಇತಿಹಾಸದ ಭಾಗ 2 ಮತ್ತು 3ನೇ ಸಂಪುಟದ ಬಿಡುಗಡೆಯ ಸಮಾರಂಭವನ್ನು ಮಾನ್ಯ ರಾಜ್ಯಪಾಲರು ಈಗ ನೆರವೇರಿಸುತ್ತಿರುವುದರಿಂದ ಎಲ್ಲ ಮಾನ್ಯ ಸದಸ್ಯರೂ ಆ ಸಮಾರಂಭದಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಈ ಸದನವನ್ನು ನಾಳೆ ಬೆಳಿಗ್ಗೆ 9 ಗಂಟೆಯವರೆಗೂ ಮುಂದೂಡಿದ್ದೇನೆ.

(ಸದನವು 4 ಗಂಟೆ 55 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 6ನೇ ಸೆಪ್ಟೆಂಬರ್ ಮಾಹೆ 1991ರ ಶುಕ್ರವಾರದಂದು ಬೆಳಿಗ್ಗೆ 9 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

MGITBP(MYS)-66/GCP/RNG/93-94-680 Books